International Journal of Kannada Research 2024; 10(1): 12-15




International Journal of Kannada Research
www.kannadajournal.com

**ISSN: 2454–5813**
IJKR 2024; 10(1): 12-15
© 2024 IJKR
www.kannadajournal.com
Received: 15-11-2023
Accepted: 18-12-2023

**ಮಹಾವೀರ ಜೈನ್**
ಸಂಶೋಧನಾ ವಿದ್ಯಾರ್ಥಿ,ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ., ಡಾ.ಹಾಮಾನಾ ಸಂಶೋಧನಾ ಕೇಂದ್ರ, ಎಸ್.ಡಿ.ಎಂ ಕಾಲೇಜು (ಸ್ವಾಯತ್ತ) ಉಜಿರೆ, ಕರ್ನಾಟಕ, ಭಾರತ

**Corresponding Author:**
**ಮಹಾವೀರ ಜೈನ್**
ಸಂಶೋಧನಾ ವಿದ್ಯಾರ್ಥಿ,ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ., ಡಾ.ಹಾಮಾನಾ ಸಂಶೋಧನಾ ಕೇಂದ್ರ, ಎಸ್.ಡಿ.ಎಂ ಕಾಲೇಜು (ಸ್ವಾಯತ್ತ) ಉಜಿರೆ, ಕರ್ನಾಟಕ, ಭಾರತ

# ಕನ್ನಡ ಜೈನ ಸಾಹಿತ್ಯದಲ್ಲಿ ಕರ್ಮಸಿದ್ಧಾಂತ

**ಮಹಾವೀರ ಜೈನ್**

**ಪೀಠಿಕೆ**

ಜೈನ ಧರ್ಮವು ಜಿನನಿಂದ ಬೋಧಿತವಾದ ಧರ್ಮ. ಜಿನನನ್ನು ದೇವರೆಂದು ಪೂಜಿಸುವವರು ಜೈನರು. ಆತ್ಮನಿಗೆ ಅಂಟಿರುವ ಎಲ್ಲಾ ಜ್ಞಾನಾವರಣೀಯಾದಿ ಎಂಟುವಿಧದ ಕರ್ಮಗಳನ್ನು ಗೆದ್ದವನು ಜಿನನಾಗುತ್ತಾನೆ. ಜೈನ ಧರ್ಮ ಮುಖ್ಯವಾಗಿ ಮೂರು ಸಿದ್ಧಾಂತಗಳನ್ನು ಪ್ರಸ್ತಾಪಿಸುತ್ತದೆ. ಅಹಿಂಸಾ ಸಿದ್ಧಾಂತ, ಅನೇಕಾಂತ ಸಿದ್ಧಾಂತ, ಕರ್ಮಸಿದ್ಧಾಂತ. ಜೈನ ಧರ್ಮವು ಈ ತತ್ವ ಸಿದ್ಧಾಂತಗಳ ವಿಸ್ತರಣೆಯ ಆರಂಭದಲ್ಲಿ ಪ್ರತಿಯೊಂದು ಜೀವಿಯಲ್ಲೂ ಇರುವ ಎರಡು ವ್ಯವಸ್ಥೆಗಳನ್ನು ಅಂದರೆ ಜೈನ ಧರ್ಮದ ಭೇದವಿಜ್ಞಾನವನ್ನು ಪ್ರಸಾಪಿಸುತ್ತದೆ. ಒಂದು ಬಹಿರಂಗ ವ್ಯವಸ್ಥೆ ಇನ್ನೊಂದು ಅಂತರಂಗ ವ್ಯವಸ್ಥೆ ಎಂದು. ಬಹಿರಂಗ ಎಂದರೆ ಹೊರಗಿರುವ ಎಲ್ಲಾ ಜಡ ಪದಾರ್ಥಗಳು. ಈ ದೇಹವು ಜಡವಾದದ್ದು. ಆತ್ಮನ(ಜೀವ) ಸಂಯೋಗವಿದ್ದರೆ ಮಾತ್ರ ದೇಹ ಚೈತನ್ಯಭರಿತವಾಗಿರುತ್ತದೆ. ಅದ್ದರಿಂದ ದೇಹವು ಜಡ ಹಾಗೂ ಬಹಿರಂಗ ವ್ಯವಸ್ಥೆ ಎನ್ನುತ್ತದೆ. ಅಂತರಂಗ ಎಂದರೆ ಪ್ರತಿಯೊಂದು ಜೀವಿಯ ದೇಹದೊಳಗಿರುವ ಆತ್ಮ ಅಥವಾ ಚೈತನ್ಯ(ಜೀವ) ಎನ್ನುತ್ತದೆ ಜೈನ ಧರ್ಮ. ದೇಹ ಬೇರೆ ಆತ್ಮ ಬೇರೆ, ದೇಹ ಮತ್ತು ಆತ್ಮನಿಗೆ ಸಂಬಂಧವಿದೆಯೇ ಹೊರತು, ದೇಹವೇ ಆತ್ಮವಲ್ಲ, ಆತ್ಮವೇ ದೇಹವಲ್ಲ. ಇದು ಜೈನ ಧರ್ಮದ ಭೇದವಿಜ್ಞಾನ. ಬಹಿರಂಗವಾದ(ದೇಹ) ವ್ಯವಸ್ಥೆ ಅಶಾಶ್ವತ, ನಶ್ವರ ಅಥವಾ ನಾಶವಾಗುವಂತದ್ದು. ಅಂತರಂಗ(ಆತ್ಮ) ವ್ಯವಸ್ಥೆ ಶ್ರೇಷ್ಠ ಮತ್ತು ಶಾಶ್ವತವಾದುದು. ಜೈನಧರ್ಮ ದೇಹಕ್ಕಿಂತಲೂ ಹೆಚ್ಚಿನ ಶಕ್ತಿಯಿರುವ, ಶಾಶ್ವತವಾದ, ಪರಮಾತ್ಮನಾಗಬಲ್ಲ ಆತ್ಮನಿಗೆ ಹೆಚ್ಚು ಒತ್ತನ್ನು ಕೊಡುವುದರಿಂದ ಜೈನಧರ್ಮವನ್ನು ಆತ್ಮ ಧರ್ಮವೆಂತಲೂ ಕರೆದಿದ್ದಾರೆ.

**"**ಪ್ರತಿಯೊಂದು ಜೀವಿಯೊಳಗು ಒಬ್ಬ ಆತ್ಮನಿದ್ದಾನೆ. ಅ ಆತ್ಮನಿಗೆ ಪರಮಾತ್ಮನಾಗಬಲ್ಲ ಶಕ್ತಿ ಇದೆ. ಪ್ರತಿಯೊಂದು ಆತ್ಮವು ಮೂಲದಲ್ಲಿ ಶುದ್ಧಾತ್ಮನೇ ಆಗಿರುತ್ತಾನೆ. ಶುದ್ಧಾತ್ಮನಾಗಿರುವ ಆತ್ಮ ಮೂಲದಿಂದಲೇ ಪರಮಾತ್ಮನಾಗಲು ಸಾಧ್ಯವಿಲ್ಲ ಕಾರಣ ಪುರುಷಾರ್ಥಗಳನ್ನು ನೆರವೇರಿಸದೆ ಆತ್ಮನಿಗೆ ಮೋಕ್ಷ ಸಾಧಿಸಲು ಅಥವಾ ಜಿನನಾಗಲು ಸಾಧ್ಯವಿಲ್ಲ. ಪುರುಷಾರ್ಥಗಳನ್ನು ನಿರ್ವಹಿಸುವಾಗ, ಪ್ರತಿಯೊಂದು ಚಟುವಟಿಕೆಯಲ್ಲೂ, ಹೆಜ್ಜೆ ಹೆಜ್ಜೆಗೂ ಆತ್ಮನಿಗೆ ಪುಣ್ಯ ಮತ್ತು ಪಾಪಗಳೆಂಬ ಕರ್ಮಗಳು ಬಂಧವಾಗುತ್ತವೆ. ಹಾಗಾಗಿ ಆತ್ಮನಿಗೆ ಅಂಟಿರುವ ಪಾಪ, ಪುಣ್ಯಗಳೆಂಬ ಅಷ್ಟ ಕರ್ಮಗಳ ಆವರಣ(ಬಂಧನ)ದ ಕಾರಣದಿಂದ ಆತ್ಮನ ಶುದ್ಧರೂಪ ಬೆಳಕಿಗೆ ಬಾರದೆ ಜನನ ಮರಣಗಳೆಂಬ ಸಂಸಾರದಲ್ಲಿ ಬೇರೆ ಬೇರೆ ಭವಗಳಲ್ಲಿ ಸುತ್ತಾಡುತ್ತಾ ಕ್ಷಣಿಕ ಸುಖ ದಃಖಗಳನ್ನು ಅನುಭವಿಸುತ್ತಾ ಇರುತ್ತಾನೆ**"** (ಸಮಯಸಾರ, ಕ.ಅ. ಬಿ.ಶಾಂತಿರಾಜಶಾಸ್ತ್ರೀ, ಪು. ೬೫)

ಜೈನಧರ್ಮದ ಮೂಲ ಉದ್ದೇಶ, ಯಾವುದೇ ಜೀವಿ ಅಥವಾ ರಾಜ, ಮಂತ್ರಿ, ಸೇವಕ ಅಥವಾ ಸಾಮಾನ್ಯನೇ ಆಗಿರಲಿ ಆತನು ತನ್ನ ಆತ್ಮನನ್ನು ಕ್ಷಣಿಕವಾಗಿರುವ ಈ ಹುಟ್ಟು ಸಾವುಗಳೆಂಬ ಭವ ಭವಗಳ ಸಂಸಾರದ ಜಂಜಾಟದಿಂದ ಬಿಡುಗಡೆಗೊಳಿಸಿ ಪರಮಾತ್ಮನನ್ನಾಗಿಸುವುದೇ ಆಗಿದೆ. ಅಂದರೆ ಶಾಶ್ವತವಾದ ಮೋಕ್ಷ(ಜಿನ) ಪದವಿಯನ್ನು ಸಂಪಾದಿಸುವುದು. ಈ ಜನನ ಮರಣಗಳ ಭವಸಾಗರದಿಂದ ಆತ್ಮನನ್ನು ಬಿಡುಗಡೆಗೊಳಿಸಬೇಕಾದರೆ ಅನಿವಾರ್ಯವಾಗಿ ಆತ್ಮನಿಗೆ ಅಂಟಿರುವ ಕರ್ಮಗಳನ್ನು ನಾಶಪಡಿಸಲೇಬೇಕು. ಕರ್ಮಗಳು ನಾಶವಾದ ಆತ್ಮ ಶುದ್ಧಾತ್ಮನಾಗಿ ಮೂಲ ಸ್ವರೂಪವನ್ನು ಪಡೆದು ಶಾಶ್ವತವಾದ ಮೋಕ್ಷ ಪದವಿಗೇರಿ ಜಿನನಾಗುತ್ತಾನೆ.

ಸಾಮಾನ್ಯವಾಗಿ ಕರ್ಮವೆಂದರೆ ನಾವು ಮಾಡುವ ಕೆಲಸವೆಂದು ಅರ್ಥವಿದೆ. ಆದರೆ ಧರ್ಮದ ಸಿದ್ಧಾಂತದಲ್ಲಿ ಕರ್ಮವೆಂದರೆ, ಕ್ಷಣಕ್ಷಣವೂ, ಪ್ರತಿ ಹೆಜ್ಜೆ ಹೆಜ್ಜೆಗೂ ನಾವು ಮಾಡುವ ಪ್ರತಿಯೊಂದು

ಕ್ರಿಯೆಯಲ್ಲೂ ಆತ್ಮನಿಗೆ ಅಂಟುವ ಪಾಪ ಪುಣ್ಯಗಳ ಒಟ್ಟು ಸಂಗ್ರಹವನ್ನು ಕರ್ಮವೆನ್ನುತ್ತಾರೆ. ಕರ್ಮಬಂಧವಾಗುವಾಗ ಅಥವಾ ಕರ್ಮೋದಯವಾಗಿ ಅದು ಫಲವನ್ನು ನೀಡುವಾಗ ಅಲ್ಲಿ ಯಾವುದೇ ರೀತಿಯ ಭೇದ ಭಾವವಿಲ್ಲ ರಾಜ, ಸೇವಕ, ಶ್ರೀಮಂತ, ಬಡವ, ಮನುಷ್ಯ, ಪ್ರಾಣಿ, ಯಾವುದೇ ಜೀವಿ ಎಲ್ಲರೂ ಪ್ರತಿ ಹೆಜ್ಜೆಹೆಜ್ಜೆಗೂ ಏನನ್ನು ಮಾಡುತ್ತವೆಯೋ ಅ ಕೆಲಸದ ಪರಿಣಾಮದಿಂದ ಆತ್ಮನಿಗೆ ಕರ್ಮ ಬಂಧವಾಗುತ್ತದೆ. ಅದರ ಫಲವನ್ನು ಮುಂದಕ್ಕೆ ಅದೇ ಜೀವಿ ಅನುಭವಿಸಬೇಕಾಗುತ್ತದೆ. ಈಗ ನಾವು ಏನನ್ನೂ ಅನುಭವಿಸುತ್ತಿದ್ದೇವೆಯೋ ಅವೆಲ್ಲವೂ ಆತ್ಮನಿಗೆ ಅಂಟಿರುವ ನಾವು ಹಿಂದೆ ಮಾಡಿರುವ ಕರ್ಮಗಳ ಪರಿಣಾಮವೇ ಆಗಿರುತ್ತದೆ. ಕರ್ಮವನ್ನು ನಾವೇ ಮಾಡುತ್ತೇವೆ. ಅದನ್ನು ಮುಂದಕ್ಕೆ ನಾವೇ ಅನುಭವಿಸುತ್ತೇವೆ.

ಉತ್ತಮ ಕ್ರೀಯೆಗಳಿಂದ ಪುಣ್ಯಕರ್ಮ ಹಾಗೂ ಕೆಟ್ಟ ಕ್ರೀಯೆಗಳಿಂದ ಪಾಪ ಕರ್ಮವೂ ಆತ್ಮನಿಗೆ ನಿರಂತರವಾಗಿ ಬಂಧವಾಗುತ್ತಿರುತ್ತದೆ. ಪುಣ್ಯ ಕರ್ಮಗಳಿಂದ ಜೀವಿಯೂ ಸುಖವನ್ನೂ, ಪಾಪ ಕರ್ಮದಿಂದ ಜೀವಿಯೂ ದುಃಖವನ್ನು ನಿರಂತರವಾಗಿ ಅನುಭವಿಸುತ್ತಿರುತ್ತಾನೆ. ನಮ್ಮ ಬದುಕಿನ ಎಲ್ಲಾ ಸುಖ ದುಃಖಗಳಿಗೆ ನಾವೇ ಕಾರಣ, ಅಂದರೆ ನಾವು ಮಾಡಿರುವ ಕರ್ಮಗಳು. ಒಮ್ಮೆ ಜೀವನು ಅಸಮಸಾಹಸವನ್ನು ಮಾಡಿ ತಪಸ್ಸು, ಭೇದವಿಜ್ಞಾನ, ತತ್ವಭಾವನಾ, ಪರಮ ಸಮಾಧಿರೂಪವಾದ ಸಾಧನವಿಶೇಷಗಳಿಂದ ನೂತನ ಕರ್ಮಗಳನ್ನು ತಡೆಯುತ್ತಲೂ ಹಳೆಯ ಕರ್ಮಗಳನ್ನು ನಾಶಮಾಡುತ್ತಲೂ ಬಂದರೆ ಆತ್ಮನಿಗೆ ಅಂಟಿದ ಎಂಟು ಕರ್ಮಗಳು ಪೂರ್ಣವಾಗಿ ನಾಶವಾಗಿ ಪಾಪ ಹಾಗೂ ಪುಣ್ಯಗಳಿಂದ ಮುಕ್ತನಾಗಿ ಅಷ್ಟಕರ್ಮಗಳನ್ನು ಗೆದ್ದು ಶುದ್ಧಾತ್ಮನಾಗಿ ಜಿನನಾಗುತ್ತಾನೆ.

ಮೋಡವು ಸೂರ್ಯನನ್ನು ಆವರಿಸಿಕೊಂಡು ಅವನ ಪ್ರಕಾಶಗುಣವನ್ನು ಮರೆಮಾಡುವಂತೆ ಕರ್ಮಗಳು ಜೀವಾತ್ಮನಲ್ಲಿ ಸೇರಿಕೊಂಡು ಅವನ ಅನಂತ ಜ್ಞಾನ, ಸುಖ, ಶಕ್ತಿ ಮೊದಲಾದ ಗುಣವನ್ನು ಮರೆಮಾಡುತ್ತದೆ. ಆ ಮೋಡವು ಕರಗಿಹೋದಾಗ ಸೂರ್ಯನ ಪ್ರಕಾಶವು ಪ್ರಕಟವಾಗುವಂತೆ, ಆತ್ಮನಿಗೆ ಆವರಿಸಿರುವ ಕರ್ಮಗಳು ನಾಶವಾದಾಗ ಆತ್ಮ ಶುದ್ಧಾತ್ಮನಾಗಿ ಜಿನನಾಗುತ್ತಾನೆ.

"ಒಂದು ಬಟ್ಟೆಯನ್ನು ಏಳೆಂಟು ಮಡಿಕೆ ಮಾಡಿ ಅದರಿಂದ ದೀಪವನ್ನು ಮುಚ್ಚಿದರೆ ಅದರ ಪೂರ್ಣವಾದ ಬೆಳಕು ಪ್ರಕಟಗೊಳ್ಳುವುದಿಲ್ಲ. ಆಗ ಅ ಬಟ್ಟೆಯ ಒಂದೊಂದೆ ಮಡಿಕೆಯನ್ನು ತಗೆದಾಗಲೆಲ್ಲ ಅದರ ಬೆಳಕು ಪ್ರಕಟಗೊಳ್ಳುತ್ತಾ ಹೋಗುತ್ತದೆ. ಕೊನೆಗೆ ಪೂರ್ಣವಾಗಿ ಬಟ್ಟೆಯನ್ನು ತಗೆದಾಗ ದೀಪದ ಸಂಪೂರ್ಣ ಬೆಳಕು ಪ್ರಕಟಗೊಳ್ಳುತ್ತದೆ. ಅದರಂತೆ ಜೀವಾತ್ಮನಿಗೆ ಅಂಟಿರುವ ಎಂಟು ಕರ್ಮಗಳು ದೂರವಾದಾಗ ಜೀವಾತ್ಮ ಪರಮಾತ್ಮನಾಗುತ್ತಾನೆ" (ಜೈನ ತತ್ವಸಾರ ಸಂಗ್ರಹ, ಪುಟ. ೭೪)

ಜೀವನಲ್ಲಿರುವ ಆತ್ಮನು ಮುಕ್ತಾತ್ಮ ಅಂದರೆ ಪರಮಾತ್ಮ(ಜಿನ)ನಾಗಬೇಕಾದರೆ ಆತ್ಮನಿಗೆ ಬಂಧವಾಗಿರುವ ಪಾಪ ಪುಣ್ಯ ಕರ್ಮಗಳು ಒಟ್ಟು ಸೇರಿದ ಅಷ್ಟಕರ್ಮಗಳು ಸಂಪೂರ್ಣವಾಗಿ ನಾಶಹೊಂದಬೇಕು. ಪುಣ್ಯ ಕರ್ಮದಿಂದ ಸುಖವುಂಟಾಗುವುದಾದರೆ ಆತ್ಮನು ಅ ಕರ್ಮದಿಂದ ಯಾಕೆ ಬಿಡುಗಡೆ ಹೊಂದಬೇಕು? ಎಂಬ ಪ್ರಶ್ನೆ ನಮ್ಮಲ್ಲಿ ಮೂಡಬಹುದು. ಆದರೆ ಪುಣ್ಯಕರ್ಮದಿಂದ ಉಂಟಾಗುವ ಸುಖವು ಅನಿತ್ಯವಾದುದು, ನಶ್ವರವಾದುದು, ಕ್ಷಣಿಕವಾದುದು. ಪುಣ್ಯಕರ್ಮವು ನಾಶವಾದ ಬಳಿಕ ಪಾಪಕರ್ಮ ಉದಯಕ್ಕೆ ಬಂದಾಗ ಜೀವನು ದುಃಖವನ್ನು ಅನುಭವಿಸಬೇಕಾಗುತ್ತದೆ. ಪಾಪ ಕರ್ಮವು ಅನಿತ್ಯವಾದುದು, ಅಶಾಶ್ವತವಾದುದು, ಕ್ಷಣಿಕವಾದುದು. ಜೀವನನ್ನು ಚಿನ್ನದ ಸಂಕೋಲೆಯಿಂದ ಬಂಧಿಸಿದರೂ, ಕಬ್ಬಿಣದ ಸಂಕೋಲೆಯಿಂದ ಬಂಧಿಸಿದರೂ ಬಂಧನಗಳೆರಡೂ ಒಂದೇ ಆಗಿರುತ್ತದೆ.

ಅದರಂತೆ ಪುಣ್ಯಕರ್ಮವಾದರೂ ಜೀವನನ್ನು ಜನನ ಮರಣಗಳೆಂಬ ಭವಬಂಧನದಲ್ಲಿರಿಸುತ್ತದೆ. ಪಾಪಕರ್ಮವಾದರೂ ಜೀವನನ್ನು ಜನನ ಮರಣಗಳೆಂಬ ಭವಬಂಧನದಲ್ಲಿರಿಸುತ್ತದೆ. ಕನ್ನಡಿಗೆ ಗಂಧವನ್ನೂ ಬಳಿದರೂ ಅದು ಮಂಕಾಗುವುದು. ಕೆಸರನ್ನೂ ಬಳಿದರೂ ಮಂಕಾಗುವುದು. ಅದೇ ರೀತಿ ಜೀವಾತ್ಮನು ಪುಣ್ಯ ಪಾಪಗಳೆಂಬ ಅಷ್ಟಕರ್ಮಗಳ ಆವರಣದಿಂದ ಆತ್ಮನ ಶುದ್ಧ ಸ್ವರೂಪ ಮಂಕಾಗುತ್ತದೆ. ಅದ್ದರಿಂದ ಪಾಪ ಪುಣ್ಯಗಳೆರಡೂ ಆತ್ಮಜ್ಞಾನಿಗೆ ಅನಗತ್ಯವಾದುದು. ತನ್ನ ಜೀವನನ್ನು ಹನ್ನೆರಡು ಬಹ್ಯಾಂತರಂಗ ತಪಸ್ಸಿನಲ್ಲಿ ತೊಡಗಿಸಿಕೊಂಡು ಅಷ್ಟಕರ್ಮಗಳನ್ನು ನಾಶಮಾಡಿ ಆತ್ಮನನ್ನು ಜಿನನನ್ನಾಗಿಸುವುದು ಅಥವಾ ಪರಮಾತ್ಮನನ್ನಾಗಿಸುವುದು ಬದುಕಿನ ಯಥಾರ್ಥವಾದ ಗುರಿಯಾಗಿದೆ.

ತೆಂಗಿನ ಮರದಲ್ಲಿರುವ ತೆಂಗಿನಕಾಯಿ ಬೆಳೆದು ಮಾಗಿ ಬಿಸಿಲಿಗೆ ಒಣಗಿ ಒಣಗಿ ಅದರೊಳಗಿನ ಕೊಬ್ಬರಿ ಚಿಪ್ಪಿನಿಂದ ಹೇಗೆ ಬಿಡಿಸಿಕೊಳ್ಳುತ್ತದೆಯೋ ಅದೇ ರೀತಿ ತಪವೆಂಬ ಬಿಸಿಲಿನಲ್ಲಿ ನಮ್ಮ ಜೀವನನ್ನು ಒಣಗಿಸಿ ದೇಹದಿಂದ ಹಾಗೂ ಕರ್ಮಗಳಿಂದ ಆತ್ಮನು ಬಿಡಿಸಿಕೊಳ್ಳುವ ಹಾಗೆ ಮಾಡಬೇಕು. ಶಿಲೆಯಿಂದ ಚಿನ್ನ ಬೇರ್ಪಡುವಂತೆ, ಹೊಟ್ಟಿನಿಂದ ಅಕ್ಕಿ ಬೇರೆಯಾಗುವಂತೆ ದೇಹ, ಪಾಪ, ಪುಣ್ಯಗಳೆಂಬ ಎಲ್ಲಾ ಬಾಹ್ಯ ಬಂಧನಗಳಿಂದ ಆತ್ಮ ಬಿಡುಗಡೆಗೊಂಡು ಮೋಕ್ಷಕ್ಕೆ ಸಾಗಬೇಕು. "ಒಣಗಿರುವ ಸೋರೆಕಾಯಿಗೆ ಮಣ್ಣನ್ನು ಮೆತ್ತಿ ಅದನ್ನು ಒಣಗಿಸಿ ನೀರಿನಲ್ಲಿ ಬಿಟ್ಟರೆ ಅದು ಮುಳುಗಿ ತಳದಲ್ಲಿ ಹೋಗಿ ನಿಲ್ಲುತ್ತದೆ. ಅ ಮಣ್ಣಿನ ಲೇಪವು ನಿಧಾನವಾಗಿ ನೀರಿನಲ್ಲಿ ಕರಗಿಹೋದಾಗ ಮೂಲದಲ್ಲಿ ಹಗುರವಾಗಿದ್ದ ಸೋರೆಕಾಯಿಯು ತನ್ನ ಹಿಂದಿನ ಮೂಲಗುಣವನ್ನು ಪಡೆದು ನಿಧಾನವಾಗಿ ಮೇಲಕ್ಕೆ ಬರುತ್ತದೆ" (ಜೈನ ತತ್ವಸಾರ ಸಂಗ್ರಹ, ಪುಟ. ೭೫)

ಅದೇ ರೀತಿ ಮೂಲದಲ್ಲಿ ಹಗುರವಾಗಿರುವ ಶುದ್ಧಾತ್ಮ ಕರ್ಮಗಳಿಂದ ಆವರಿಸಲ್ಪಟ್ಟು ಭಾರನಾಗಿ ಅಧೋಗತಿಯಲ್ಲಿ ಸಂಸಾರ ಬಂಧನದಲ್ಲಿ ಸಿಲುಕಿದ್ದಾನೆ. ಇದರಿಂದ ಮುಕ್ತನಾದಾಗ ಮೂಲ ಗುಣ ಸ್ವರೂಪವನ್ನು ಹೊಂದಿ ಮೇಲ್ಮುಖನಾಗಿ ಚಲಿಸಿ ಜಿನನಾಗುತ್ತಾನೆ.

> ಅಷ್ಟವಿಧಕರ್ಮವಿಕಲಾಃ ಶೀತೀಭೂತಾ ನಿರಂಜನಾ ನಿತ್ಯಾಃ ।
> ಅಷ್ಟಗುಣಾಃ ಕೃತಕೃತ್ಯಾ ಲೋಕಾಗ್ರನಿವಾಸಿನಃ ಸಿದ್ಧಾಃ ॥

ಗೋಮಟಸಾರ ಜೈನಗ್ರಂಥದಲ್ಲಿ ಆತ್ಮನು ಘಾತಿ ಅಘಾತಿ ಕರ್ಮಗಳೆಂಬ ಅಷ್ಟಕರ್ಮಗಳಿಂದ ಎಲ್ಲಿ ಮುಕ್ತರಾಗುತ್ತಾರೋ ಅಲ್ಲೇ ಇರದೆ ಊರ್ಧ್ವಗಮನ ಸ್ವಭಾವದಿಂದ ಲೋಕದ ತುತ್ತ ತುದಿಗೆ ಹೋಗಿ ಅಲ್ಲಿ ಸುಖದಿಂದ ತಣಿದವರೂ, ನಿರಂಜನರೂ ಆದ ಸಮ್ಯಕ್ತ್ವ, ಜ್ಞಾನ, ದರ್ಶನ, ಶಕ್ತಿ, ಸೂಕ್ಷ್ಮತ್ವ, ಅವಗಹನತ್ವ, ಅಗುರುಲಘುತ್ವ, ಅವ್ಯಾಬಾಧತ್ವಗಳೆಂಬ ಎಂಟು ಗುಣಗಳುಳ್ಳವರೂ ಕೃತಕೃತ್ಯರೂ ಲೋಕಾಗ್ರನಿವಾಸಿಗಳೂ ಆಗಿರುತ್ತಾರೆಂದು ಹೇಳಿದ್ದಾರೆ.

ಆತ್ಮನು ಸರ್ವಸ್ವತಂತ್ರನು. ಅವನೇ ಕರ್ತೃವೂ ಭೋಕ್ತೃವೂ ಆಗಿದ್ದಾನೆ. ಮೂಲದಲ್ಲಿ ಶುದ್ಧನಾಗಿರುವ ಆತ್ಮನು ಅನಾದಿ ಕಾಲದಿಂದಲೂ ಕರ್ಮದೊಡನೆ ಸೇರಿ ದೇವ, ನಾರಕಿ, ಮನುಷ್ಯ, ತಿರ್ಯಂಚ ಎಂಬ ಚತುರ್ಗತಿಗಳಲ್ಲಿ ಹುಟ್ಟಿ ಸತ್ತು ಸುಖ ದುಃಖಗಳನ್ನು ಅನುಭವಿಸುತ್ತಾ ಕರ್ಮವು ತಿರುಗಿಸಿದಂತೆ ತಿರುಗುತ್ತಾ ಸಂಸಾರದಲ್ಲಿ ಹೊರಳಾಡುತ್ತಿದ್ದಾನೆ.

ಅನಾದಿಕಾಲದಿಂದಲೂ ಕಲ್ಲಿನೊಂದಿಗೆ ಚಿನ್ನವು ಸೇರಿದಂತೆ, ಶುದ್ಧನಾದ ಆತ್ಮನು ಜಡಕರ್ಮದೇಹದೊಂದಿಗೆ ಆತ್ಮವು ಸೇರಿಕೊಂಡಿದೆ. ಯಂತ್ರದಿಂದ ಕಲ್ಲನ್ನು ಚಿನ್ನವನ್ನು ಬೇರೆ ಮಾಡಬಹುದು. ಅದೇ ರೀತಿ ತಪಸ್ಸಿನಿಂದ ಕರ್ಮವನ್ನು ಆತ್ಮನನ್ನು ಬೇರೆ ಮಾಡಬಹುದು. ಕಲ್ಲಿನಿಂದ ಬೇರ್ಪಟ್ಟ ಚಿನ್ನ ಮತ್ತೆ ಕಲ್ಲನ್ನು

ಸೇರುವುದಿಲ್ಲ. ಹಾಗೆಯೇ ಕರ್ಮದಿಂದ ಸಂಪೂರ್ಣ ಬೇರ್ಪಟ್ಟ ಶುದ್ಧಾತ್ಮ ಮತ್ತೆ ಕರ್ಮದೊಂದಿಗೆ ಸೇರುವುದಿಲ್ಲ. ಕರ್ಮದಿಂದ ಬಿಡುಗಡೆಗೊಂಡ ಶುದ್ಧನಾದ ಆತ್ಮನಿಗೆ ದೇಹವಿಲ್ಲ. ದೇಹವು ಕರ್ಮದ ಪ್ರತೀಕ. ಆದ್ದರಿಂದ ಮುಕ್ತಾತ್ಮನು ಶಾಶ್ವತ ಸುಖವನ್ನು ಅನುಭವಿಸುತ್ತಾ ಲೋಕಾಗ್ರದಲ್ಲಿ ಸಿದ್ಧನಾಗುತ್ತಾರೆ.

ಕರ್ಮವು ಘಾತಿಕರ್ಮ ಹಾಗೂ ಅಘಾತಿಕರ್ಮವೆಂದು ಎರಡು ಪ್ರಕಾರದ್ದಾಗಿದೆ. ಘಾತಿ ಕರ್ಮವು ಅನಂತಜ್ಞಾನಾದಿ ಗುಣಗಳನ್ನು ಘಾತ ಮಾಡುವುದು ಹಾಗೂ ಘಾತಿ ಕರ್ಮಗಳನ್ನು ನಾವು ಸ್ವ ಪ್ರಯತ್ನದಿಂದ ನಾಶಗೊಳಿಸಬಹುದು. ಆ ಗುಣಗಳನ್ನು ಘಾತ ಮಾಡದಿರುವ ಲಘು ಕರ್ಮಕ್ಕೆ ಅಘಾತಿ ಕರ್ಮಗಳೆನ್ನುವರು ಹಾಗೂ ಅಘಾತಿ ಕರ್ಮಗಳನ್ನು ಪ್ರಯತ್ನದಿಂದ ನಾಶಗೊಳಿಸಲು ಸಾಧ್ಯವಿಲ್ಲ, ಬದಲಾಗಿ ಅನುಭವಿಸಿಯೇ ನಾಶಗೊಳಿಸಬೇಕು.

ಕರ್ಮದ ಭೇದ ಹಾಗೂ ಉತ್ತರ ಭೇದಗಳು ದ್ರವ್ಯಾನುಯೋಗ ಗ್ರಂಥದಲ್ಲಿ ಹೇಳಿರುವಂತೆ.

ಅಷ್ಟಕರ್ಮಾಣಿ॥ ಕರ್ಮಗಳು ಎಂಟು.
ಜ್ಞಾನಾವರಣೀಯಂ ಪಂಚವಿಧಮ್॥
ಜ್ಞಾನಾವರಣೀಯ ಕರ್ಮವು ಎಂಟು ಪ್ರಕಾರವಾಗಿದೆ.
ದರ್ಶನಾವರಣೀಯಂ ನವವಿಧಮ್॥
ದರ್ಶನಾವರಣೀಯ ಕರ್ಮವು ಒಂಬತ್ತು.
ವೇದನೀಯಂ ದ್ವಿವಿಧಮ್॥
ವೇದನೀಯ ಕರ್ಮವು ಎರಡು ಪ್ರಕಾರವಾಗಿದೆ.
ಮೋಹನೀಯಮಷ್ಟಾವಿಂಶತಿವಿಧಮ್॥
ಮೋಹನೀಯ ಕರ್ಮವು ಇಪ್ಪತ್ತೆಂಟು ವಿಧ.
ಆಯುಶ್ಚತುರ್ವಿಧಮ್॥
ಆಯು ಕರ್ಮವು ನಾಲ್ಕು ಪ್ರಕಾರವಾಗಿದೆ.
ದ್ವಿ ಚತ್ವಾರಿಂಶದ್ವಿಧಂ ನಾಮ॥
ನಾಮ ಕರ್ಮವು ನಲವತ್ತೆರಡು ಪ್ರಕಾರವಾಗಿದೆ.
ದ್ವಿವಿಧಂ ಗೋತ್ರಮ್॥
ಗೋತ್ರ ಕರ್ಮವು ಎರಡು ಪ್ರಕಾರವಾಗಿದೆ.
ಪಂಚವಿಧಮಂತರಾಯಮ್॥
ಅಂತರಾಯ ಕರ್ಮವು ಐದು ಪ್ರಕಾರವಾಗಿದೆ.

ಕರ್ಮಗಳಲ್ಲಿ ಪ್ರಮುಖವಾಗಿ ಎಂಟು ವಿಧಗಳು. ಜ್ಞಾನಾವರಣೀಯ ಕರ್ಮ, ದರ್ಶನಾವರಣೀಯ ಕರ್ಮ, ಮೋಹನೀಯಕರ್ಮ, ಅಂತರಾಯಕರ್ಮ ಈ ನಾಲ್ಕು ಕರ್ಮಗಳನ್ನು ಘಾತಿ ಕರ್ಮಗಳೆನ್ನುವರು. ಆಯು ಕರ್ಮ, ನಾಮ ಕರ್ಮ, ಗೋತ್ರ ಕರ್ಮ, ವೇದನೀಯ ಕರ್ಮ ಈ ನಾಲ್ಕು ಕರ್ಮಗಳು ಅಘಾತಿ ಕರ್ಮಗಳಾಗಿವೆ.

ಈ ಎಂಟು ಕರ್ಮಗಳ ಕಾರ್ಯವನ್ನು ವಿವರಿಸಲು ಶಾಸ್ತ್ರದಲ್ಲಿ ಎಂಟು ನಿದರ್ಶನಗಳನ್ನು ಕೊಟ್ಟಿದ್ದಾರೆ. ಜ್ಞಾನಾವರಣೀಯ ಕರ್ಮವು ಬಟ್ಟೆಯ ಪಟ್ಟಿಯಂತೆ. ಹೇಗೆ ಕಣ್ಣಿಗೆ ಕಟ್ಟಿರುವ ಬಟ್ಟೆಯ ಪಟ್ಟಿಯು ದೃಷ್ಟಿಗೆ ಅಡ್ಡಿ ಮಾಡುತ್ತದೆಯೋ, ಅದೇ ರೀತಿ ಜ್ಞಾನಾವರಣೀಯ ಕರ್ಮವು ಆತ್ಮನ ನಿಜವಾದ ಜ್ಞಾನವನ್ನು ಪ್ರಕಟಗೊಳ್ಳಲು ಬಿಡುವುದಿಲ್ಲ. ದರ್ಶನಾವರಣೀಯ ಕರ್ಮವು ದ್ವಾರಪಾಲಕನಂತೆ. ಹೇಗೆ ದ್ವಾರಪಾಲಕನ ಅನುಮತಿಯಿಲ್ಲದೆ ಯಾವುದೇ ಮನೆ, ಕಛೇರಿಯನ್ನು ಪ್ರವೇಶ ಮಾಡಲಾಗುವುದಿಲ್ಲವೋ, ಹಾಗೆಯೇ ದರ್ಶನಾವರಣೀಯ ಕರ್ಮವು ಆತ್ಮನು ಅನಂತ ದರ್ಶನ(ನೋಟ) ಮಾಡುವುದನ್ನು ತಡೆಯುತ್ತದೆ.

ವೇದನೀಯಕರ್ಮವು ಹರಿತವಾದ ಕತ್ತಿಯ ಮೇಲಿನ ಜೇನುತುಪ್ಪದ ಸವಿಯಂತಿರುತ್ತದೆ, ಅದು ಒಂದೇ ಕಾಲದಲ್ಲಿ ಸುಖ ಕೊಡುವಂತಿರುತ್ತದೆ, ಆದರೆ ಅದರ ಪರಿಣಾಮವು ದುಃಖಕರವಾಗಿರುತ್ತದೆ. ಮೋಹನೀಯ ಕರ್ಮವು ಮದ್ಯದಂತೆ. ಯಾವ ರೀತಿ ಮದ್ಯದ ನಶೆಯಲ್ಲಿ ವ್ಯಕ್ತಿಗೆ ತನ್ನ ಒಳಿತು ಮತ್ತು ಕೆಡುಕಿನ ವಿಚಾರವು ಗೊತ್ತಿರುವುದಿಲ್ಲವೋ ಹಾಗೂ ಯಾವುದನ್ನೂ ವಿಚಾರಿಸದೆ ಆಚರಣೆಯನ್ನೂ ಮಾಡುತ್ತಾ ಇರುತ್ತಾನೋ, ಅದೇ ರೀತಿ ಮೋಹನೀಯಕರ್ಮವೂ ಆತ್ಮನನ್ನು ವಿವೇಕ ಹೀನನ್ನಾಗಿ ಮಾಡಿ ಅವನ ಆಚಾರ, ವಿಚಾರವನ್ನು ವಿಕಾರವಾಗುವಂತೆ ಮಾಡುತ್ತದೆ.

ಆಯುಕರ್ಮವು ಗೂಟದಂತಿರುತ್ತದೆ. ಯಾವ ರೀತಿ ಗೂಟದಲ್ಲಿ ಕಟ್ಟಿದ ಪಶುವು ಅದರ ಸುತ್ತಲೂ ತಿರುಗುತ್ತಿರುತ್ತದೆಯೋ, ಅದೇ ರೀತಿ ಆಯುಕರ್ಮದ ಬಂಧನದಲ್ಲಿ ಆತ್ಮನು ಬೇರೆ ಬೇರೆ ಭವಗಳಲ್ಲಿ ಸಿಲುಕುತ್ತಾನೆ. ನಾಮಕರ್ಮವು ಚಿತ್ರಕಾರನಿದ್ದಂತೆ. ಹೇಗೆ ಚಿತ್ರಕಾರನು ಚಿಕ್ಕ–ದೊಡ್ಡ, ಒಳ್ಳೆಯ–ಕೆಟ್ಟ ಹೀಗೆ ವಿಭಿನ್ನ ರೀತಿಯ ಅನೇಕ ಪ್ರಕಾರದ ಚಿತ್ರಗಳ ರಚನೆಯನ್ನು ಮಾಡುತ್ತಾನೋ, ಅದೇ ಪ್ರಕಾರದಲ್ಲಿ ನಾಮಕರ್ಮವು ಜೀವನಿಗೆ ಚಿತ್ರ–ವಿಚಿತ್ರವಾದ ವಿಭಿನ್ನವಾದ ಶರೀರವನ್ನು ನಿರ್ಮಾಣ ಮಾಡುತ್ತದೆ.

ಗೋತ್ರ ಕರ್ಮವು ಕುಂಬಾರನಂತೆ ಕೆಲಸ ಮಾಡುತ್ತದೆ. ಯಾವ ಪ್ರಕಾರ ಕುಂಬಾರನು ಚಿಕ್ಕ ದೊಡ್ಡ ಪಾತ್ರೆಗಳನ್ನು ತಯಾರು ಮಾಡುತ್ತಾನೋ, ಅದೇ ರೀತಿ ಗೋತ್ರಕರ್ಮವು ಆತ್ಮನನ್ನು ಉಚ್ಚ ಅಥವಾ ನೀಚಗೋತ್ರದಲ್ಲಿ ಹುಟ್ಟುವಂತೆ ಮಾಡುತ್ತದೆ. ಅಂತರಾಯಕರ್ಮವು ಭಂಡಾರಿಯ ಹಾಗೆ ಕಾರ್ಯ ಮಾಡುತ್ತದೆ. ಹೇಗೆ ಭಂಡಾರಿಯ ಅನುಮತಿಯಿಲ್ಲದೆ ರಾಜನ ಭಂಡಾರದಿಂದ ಹಣವನ್ನು, ಸಂಪತ್ತನ್ನೋ ತಗೆಯಲಾಗುವುದಿಲ್ಲವೋ, ಅದೇ ರೀತಿಯಲ್ಲಿ ಅಂತರಾಯಕರ್ಮವು ಆತ್ಮನ ಅನಂತ ಶಕ್ತಿಗೆ ಅಡ್ಡಿಯಾಗುತ್ತದೆ.

ಕನ್ನಡ ಜೈನ ಆಗಮಿಕ ಸಾಹಿತ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಜೈನ ಧರ್ಮದ ಕರ್ಮಸಿದ್ಧಾಂತದ ತಳಹದಿಯ ಮೇಲೆಯೆ ರಚಿತವಾದುದು ಕಂಡುಬರುತ್ತದೆ. ಪಂಪನ ಆದಿಪುರಾಣ, ಜನ್ನನ ಯಶೋಧರನ ಚರಿತೆ, ಶಿವಕೋಟ್ಯಾಚಾರ್ಯರ ವಡ್ಡಾರಾಧನೆ, ಚಾವುಂಡರಾಯನ ಚಾವುಂಡರಾಯ ಪುರಾಣ, ನಯಸೇನನ ಧರ್ಮಾಮೃತ ಇನ್ನಿತರ ಕಾವ್ಯ, ಗದ್ಯ ಗ್ರಂಥಗಳನ್ನು ಅಧ್ಯಯನ ನಡೆಸಿದಾಗ ಅಲ್ಲಿ ಬರುವ ಪಾತ್ರಗಳ ಬದುಕು, ಸನ್ನಿವೇಶಗಳು ಕರ್ಮಸಿದ್ಧಾಂತವನ್ನು ಸ್ಪಷ್ಟಪಡಿಸುತ್ತದೆ. ಈ ಕಾರಣದಿಂದ ಕನ್ನಡ ಜೈನ ಆಗಮಿಕ ಕಾವ್ಯ, ಪುರಾಣ, ಗದ್ಯಗಳ ಅಧ್ಯಯನದ ಸಂದರ್ಭದಲ್ಲಿ ಜೈನಧರ್ಮದ ಕರ್ಮಸಿದ್ಧಾಂತದ ಜ್ಞಾನವಿದ್ದರೆ ಮಾತ್ರ ಅಧ್ಯಯನ ಪರಿಪಕ್ವವಾಗಲು ಸಾಧ್ಯ.

**ಪರಾಮರ್ಶನ ಗ್ರಂಥಗಳು**

೧. ಆಚಾರ್ಯ ಶ್ರೀ ನರೇಂದ್ರಸೇನ, ೧೯೮೫, ಸಿದ್ಧಾಂತಸಾರ ಸಂಗ್ರಹ, ಸ್ವಸ್ತಿಕ್ ಪ್ರಿಂಟರ್ಸ್ ಬಸವನಗುಡಿ ಬೆಂಗಳೂರು.
೨. ಐಲಕ ೧೦೫ ಮುನಿಸಾಗರರು(ಸಂಪಾದಕರು), ೨೦೦೦, ಶ್ರೀ ಸಮಂತ ಭದ್ರಾಚಾರ್ಯ ವಿರಚಿತ ಅನ್ವಯಾರ್ಥ ತಾತ್ಪರ್ಯ ವೃತ್ತಿ ಕಥೆಗಳ ಸಹಿತ ಸಮ್ಯಕ್ ತಿಳಿ ಮುಕ್ತಿದಾರಿ ಹಿಡಿ, ಪ್ರಕಾಶಕರು ಯೋಗೇಶ ಮಕವಾನಾ ಮುಂಬಯಿ.
೩. ಜೋಡಟ್ಟಿ ಟಿ.ಆರ್.(ಅನುವಾದ), ೨೦೧೪, ಕರ್ಮ ವ್ಯವಸ್ಥೆ, ಮನೋಹರ ಮುದ್ರಣಾಲಯ, ಧಾರವಾಡ–೧.
೪. ಧರಣೇಂದ್ರಪ್ಪ ಹಣಮಂತಪ್ಪ ಗುಗ್ಗರಿ(ಸಂಪಾದಕರು), ೧೯೮೪, ಜೈನ ಸಿದ್ಧಾಂತ ಸಾರ ಸಂಗ್ರಹ(ಕೈಪಿಡಿ), ಸನ್ಮತಿ ಪ್ರಕಾಶನ, ಮುಂಬಯಿ.

೫. ಪದ್ಮನಾಭಶರ್ಮ ಡಿ.(ಅನುವಾದಕರು), ೧೯೭೬, ಶ್ರೀಮತ್ ಕುಂಕುಂದಾಚಾರ್ಯವಿರಚಿತ ರಯಣಸಾರ, ಪ್ರಕಾಶಕರು ರತ್ನಮ್ಮ ಹೆಗ್ಗಡೆ, ಧರ್ಮಸ್ಥಳ.

೬. ಪಾಟೀಲ ಎಂ.ಬಿ.(ಅನುವಾದಕರು), ೧೯೮೯, ಶ್ರೀಮತ್ ಕುಂಕುಂದಾಚಾರ್ಯವಿರಚಿತ ನಿಯಮಸಾರ, ಪ್ರಕಾಶಕರು, ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್ ಬೆಂಗಳೂರು.

೭. ಪಾಟೀಲ ಎಂ.ಬಿ.(ಅನುವಾದಕರು), ೧೯೮೩, ಶ್ರೀಮತ್ ಕುಂದಕುಂದಾಚಾರ್ಯ ವಿರಚಿತ ಸಮಯಸಾರ, ಪ್ರಕಾಶಕರು, ದಿಗಂಬರ ಜೈನ ಟ್ರಸ್ಟ್ –ಅಧ್ಯಾತ್ಮ ಪ್ರಕಾಶನ ಸಂಸ್ಥೆ, ಬೆಂಗಳೂರು.

8. ಪುಟ್ಟಸ್ವಾಮಿ ಡಿ.(ಸಂಪಾದನೆ), ೧೯೬೫, ಜೈನತತ್ವಸಾರಸಂಗ್ರಹ, ವಿವೇಕಾಭ್ಯುದಯ ಕಾರ್ಯಾಲಯ ವೀರಭವನ, ಮಂಗಳೂರು.